**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07-10-2023.**

**ಮುಂದುವರೆದ ಪಾಟೀ ಸವಾಲು - 2 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ನನ್ನ ಜನ್ಮ ದಿನಾಂಕ ದಿ.30-06-1990 ಎಂದರೆ ಸರಿ. ವಾದಿಯ ತಂದೆ ಚಿಕ್ಕಪಿಳ್ಳಯ್ಯ ಅವರು ವ್ಯವಸಾಯ ಮಾಡುತ್ತಿದ್ದರು. ನಾನು ಹುಟ್ಟುವ ಪೂರ್ವದಲ್ಲಿ ಅವರು ಏನು ಮಾಡುತ್ತಿದ್ದರು ಎಂದು ವಾದಿಯಿಂದ ನಾನು ತಿಳಿದುಕೊಂಡಿದ್ದೇನೆ. ಅವರು ಮರದ ದಿಮ್ಮಿಗಳ ಕಾಂಟ್ರಾಕ್ಟ್ ಕೆಲವನ್ನು ಮಾಡಿಸುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಅವರಿಗೆ ವ್ಯವಸಾಯದಿಂದ ಆದಾಯ ಇರಲಿಲ್ಲ, ಸದರಿ ಕಾಂಟ್ರಾಕ್ಟ್ ಕೆಲಸದಿಂದ ಆದಾಯ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಿ.ಡಿ.1 ರ ಆಸ್ತಿಗಳು ಚಿಕ್ಕಪಿಳ್ಳಯ್ಯ ಅವರಿಗೆ ಮಂಜೂರು ಆಗುವ ಪೂರ್ವದಲ್ಲಿ ಅವರ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಆ ಸಮಯದಲ್ಲಿ ಬೇರೆ ಯಾವ ಆಸ್ತಿ ಇತ್ತು ಎಂದು ನನಗೆ ಮಾಹಿತಿ ಇಲ್ಲ. ನಮ್ಮ ತಾಯಿಯವರು ಹೇಳಿರುವುದರಿಂದ ಬೇರೆ ಆಸ್ತಿ ಇತ್ತು ಎಂದು ಹೇಳುತ್ತಿದ್ದೇನೆ. ನಾನು ಆ ಬಗ್ಗೆ ದಾಖಲಾತಿಯನ್ನು ನೋಡಿರುವುದಿಲ್ಲ. 1961 ರ ಪೂರ್ವದಲ್ಲಿ ಚಿಕ್ಕಪಿಳ್ಳಯ್ಯ ಅವರ ಹೆಸರಿನಲ್ಲಿ ಆಸ್ತಿಗಳು ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ಬಗ್ಗೆ ಯಾವುದೇ ದಾಖಲಾತಿ ಇಲ್ಲದ ಕಾರಣ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ 1 ನೇ ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಅವರು ತಕರಾರಿನಲ್ಲಿ ಹೇಳಿರುವುದು ಸುಳ್ಳು. ವಾದಿ ಈ ದಾವೆಯನ್ನು 11 ಸರ್ವೆ ಸಂಖ್ಯೆಗಳ ಬಗ್ಗೆ ದಾಖಲಿಸಿರುತ್ತಾರೆ. ನನಗೆ ಕೆಲವು ಸರ್ವೆ ಸಂಖ್ಯೆಗಳು ನೆನಪಿವೆ, ಕೆಲವು ನೆನಪಿಲ್ಲ. ಸೂಳೇಕುಂಟೆ ಗ್ರಾಮದ ಸರ್ವೆ ಸಂಖ್ಯೆ 35-1 ರಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನೆನಪಿಲ್ಲ. ಲಿಗದೀರನ ಗೊಲ್ಲಹಳ್ಳಿಯ ಸರ್ವೆ ಸಂಖ್ಯೆ 49 ರಲ್ಲಿ 5 ಎಕರೆ 10 ಗುಂಟೆ ಚೆಕ್ಕುಬಂದಿ

ನೆನಪಿಲ್ಲ. ಸದರಿ ಗ್ರಾಮದ ಸರ್ವೆ ಸಂಖ್ಯೆ 76 ವಿಸ್ತೀರ್ಣ ಮತ್ತು ಚೆಕ್ಕುಬಂದಿ ನೆನಪಿಲ್ಲ. ಸೂಳೆಕುಂಟೆ ಗ್ರಾಮದ ಸರ್ವೆ ಸಂಖ್ಯೆ 28-4 ರ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನೆನಪಿಲ್ಲ. ಉಳಿದ ಆಸ್ತಿಗಳ ಬಗ್ಗೆ ನನಗೆ ನೆನಪಿಲ್ಲ. ದಾವಾ ಐಟಂ ಸಂಖ್ಯೆ 7 ಚಿಕ್ಕಪಿಳ್ಳಯ್ಯ ಅವರಿಗೆ ಮಂಜೂರು ಆದ ಸ್ವತ್ತು. ಆ ಬಗ್ಗೆ ಮಂಜೂರಾತಿ ಆದೇಶ ನೋಡಿರುವುದಿಲ್ಲ. ವಾದ ಪತ್ರ ಆಥವಾ ನನ್ನ ಪ್ರಮಾಣ ಪತ್ರದಲ್ಲಿ ಸದರಿ ಸ್ವತ್ತು ಮಂಜೂರು ಆಗಿರುವ ಸ್ವತ್ತು ಎಂದು ನಮೂದಿಸಲಾಗಿದೆಯೋ ಎಂದು ನನಗೆ ಮಾಹಿತಿ ಇಲ್ಲ. ಸದರಿ ಸ್ವತ್ತು ಯಾವ ವರ್ಷ ಮಂಜೂರು ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ತಾಯಿಯ ಮದುವೆಯಾದ ನಂತರ ಮಂಜೂರು ಆಗಿರುತ್ತದೆ. ಅದು ಚಿಕ್ಕಪಿಳ್ಳಯ್ಯ ಅವರ ಹೆಸರಿಗೆ ಮಂಜೂರು ಆದ ಆಸ್ತಿ. ಮಂಜೂರಾತಿ ಆದ ನಂತರ ಚಿಕ್ಕಪಿಳ್ಳಯ್ಯ ಅವರು ಎಷ್ಟು ಶುಲ್ಕವನ್ನು ಪಾವತಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಈಗ ದಾವಾ ಐಟಂ ಸಂಖ್ಯೆ 7 ರ ಬಗ್ಗೆ ಚಿಕ್ಕಪಿಳ್ಳಯ್ಯ ಅವರಿಗೆ ಮಂಜೂರು ಆಗಿರುವ ಆದೇಶದ ಪ್ರತಿಯನ್ನು ನೋಡುತ್ತಿದ್ದು ಅದನ್ನು ಒಪ್ಪಿಕೊಂಡು **ನಿ.ಡಿ.**2 ಎಂದು ಗುರುತಿಸಲಾಯಿತು.

**2)** ದಾವಾ ಐಟಂ ಸಂಖ್ಯೆ 4 ಚಿಕ್ಕಪಿಳ್ಳಯ್ಯ ಅವರಿಗೆ ಹೇಗೆ ಬಂತು ಎಂದು ನನಗೆ ಮಾಹಿತಿ ಇಲ್ಲ. ವಾದಿ ಸದರಿ ಸ್ವತ್ತು ಪಿತ್ರಾರ್ಜಿತವಾಗಿ ಬಂದ ಸ್ವತ್ತು ಎಂದು ಹೇಳಿರುತ್ತಾರೆ. ನಾನು ಆ ಬಗ್ಗೆ ದಾಖಲೆಗಳನ್ನು ನೋಡಲು ಪ್ರಯತ್ನಿಸುತ್ತಿದ್ದೇನೆ. ಆ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲ, ವಾದಿಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಚಿಕ್ಕಪಿಳ್ಳಯ್ಯ ಅವರಿಗೆ ಯಾವ ದಾಖಲೆ ಆಧಾರದ ಮೇರೆಗೆ ಸದರಿ ಸ್ವತ್ತು ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ನನಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಚಿಕ್ಕಪಿಳ್ಳಯ್ಯ ಅವರ ಹೆಸರಿನಲ್ಲಿರುವ ದಾವಾ ಐಟಂ ಸಂಖ್ಯೆ 4 ರ ಕ್ರಯಪತ್ರ ಎನ್ನಲು ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಸದರಿ ಸ್ವತ್ತು ಈಗ ತೋರಿಸಿದ ಕ್ರಯಪತ್ರದ ಆಧಾರದ ಮೇಲೆ ಚಿಕ್ಕಪಿಳ್ಳಯ್ಯ ಅವರಿಗೆ ಬಂದ ಆಸ್ತಿ ಎಂದರೆ ಸರಿಯಲ್ಲ. ಚಿಕ್ಕಪಿಳ್ಳಯ್ಯ ಅವರು ದಿ.02-01-1966 ರಲ್ಲಿ ಮುನಿಅಕ್ಕಯಮ್ಮ ಅವರಿಂದ ರೂ.1000/- ನೀಡಿ ಸದರಿ ಸ್ವತ್ತನ್ನು

ಖರೀದಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ರೂ.1000/- ಗಳನ್ನು ಚಿಕ್ಕಪಿಳ್ಳಯ್ಯ ಅವರು ಹೇಗೆ ಹೊಂದಿಸಿದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಆ ಬಗ್ಗೆ ನಮ್ಮ ತಾಯಿಗೆ ಗೊತ್ತಿದೆಯೋ ಎಂದು ನನಗೆ ಮಾಹಿತಿ ಇಲ್ಲ. ಸದರಿ ಕ್ರಯಪತ್ರ ಮಾಡಿಕೊಳ್ಳುವಾಗ ವಾದಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಹಾಜರಿದ್ದರೋ ಎಂದು ನನಗೆ ಮಾಹಿತಿ ಇಲ್ಲ. ಅದರಲ್ಲಿ ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಪ್ರಕಾರ ಚಿಕ್ಕಪಿಳ್ಳಯ್ಯ ಅವರಿಗೆ ದಾವಾ ಐಟಂ ಸಂಖ್ಯೆ 4 ಬಂದಿರುವ ವಿಚಾರ ಗೊತ್ತಿದ್ದೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3)** ದಾವಾ ಐಟಂ ಸಂಖ್ಯೆ 5 ಚಿಕ್ಕಪಿಳ್ಳಯ್ಯ ಅವರಿಗೆ ಹೇಗೆ ಬಂತು ಎಂದು ಹೇಳಲು ವಾದಿ ಎಲ್ಲಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿವೆ ಎಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತೇನೆ. ಹಾಗೆ ಪಿತ್ರಾರ್ಜಿತವಾಗಿ ಬಂದಿವೆ ಎಂದು ತೋರಿಸಲು ದಾಖಲೆಗಳನ್ನು ಈಗಲೂ ಹುಡುಕುತ್ತಿದ್ದೇವೆ. ಸದರಿ ಸ್ವತ್ತು ನಮ್ಮ ತಾತ ಅವರಿಗೆ ಕ್ರಯಪತ್ರದ ಮೂಲಕ ಬಂದ ಆಸ್ತಿ ಎಂದರೆ ಸರಿಯಲ್ಲ. ಸದರಿ ಸ್ವತ್ತು ಚಿಕ್ಕಪಿಳ್ಳಯ್ಯ ಅವರಿಗೆ ದಿ.07-07-1969 ರ ಕ್ರಯಪತ್ರದ ಪ್ರಕಾರ ಬಂದ ಆಸ್ತಿ ಎಂದರೆ ನನಗೆ ಮಾಹಿತಿ ಇಲ್ಲ. ತಳವಾರ ಮುನಿಯಪ್ಪ ಅವರು ಸದರಿ ಕ್ರಯಪತ್ರದ ಪ್ರಕಾರ ಚಿಕ್ಕಪಿಳ್ಳಯ್ಯ ಅವರಿಗೆ ಐಟಂ ಸಂಖ್ಯೆ 5 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಕ್ರಯಪತ್ರದ ಪ್ರಕಾರ ಚಿಕ್ಕಪಿಳ್ಳಯ್ಯ ಅವರು ಐಟಂ ಸಂಖ್ಯೆ 5 ರ ಮಾಲೀಕರಾದರು ಎಂದರೆ ನನಗೆ ಮಾಹಿತಿ ಇಲ್ಲ.

**4)** ದಾವಾ ಐಟಂ ಸಂಖ್ಯೆ 6 ಪಿತ್ರಾರ್ಜಿತವಾಗಿ ಬಂದ ಆಸ್ತಿ. ಆ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಸದರಿ ಸ್ವತ್ತು ದಿ.04-01-1967 ರಲ್ಲಿ ಹನುಮಂತಪ್ಪನ ಮಗ ಮುನಿಶಾಮಪ್ಪ ರವರು ಚಿಕ್ಕಪಿಳ್ಳಯ್ಯ ಅವರಿಗೆ ಮಾರಾಟ

ಮಾಡಿರುವ ಸ್ವತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಸ್ವತ್ತನ್ನು 100 ರೂಪಾಯಿಗೆ ಚಿಕ್ಕಪಿಳ್ಳಯ್ಯ ಅವರು ಖರೀದಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

5) ದಾವಾ ಐಟಂ ಸಂಖ್ಯೆ 9 ಚಿಕ್ಕಪಿಳ್ಳಯ್ಯ ಅವರಿಗೆ ಮಂಜೂರಾತಿ ಮೂಲಕ ಬಂದಿರುವ ಸ್ವತ್ತು. ಸದರಿ ಸ್ವತ್ತು ಕ್ರಯಪತ್ರ ದಿ.02-02-1970 ರ ಪ್ರಕಾರ ಆಂಜಿನಪ್ಪ ಅವರಿಂದ ಚಿಕ್ಕಪಿಳ್ಳಯ್ಯ ಅವರಿಗೆ ಬಂದ ಆಸ್ತಿ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಮೇಲೆ ಹೇಳಿದ ಕ್ರಯಪತ್ರಗಳನ್ನು ತೆಗೆಸಿ ನೋಡಲು ಪ್ರಯತ್ನಿಸಿದ್ದು ಅವು ಸಿಕ್ಕಿರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ಅರ್ಜಿಗಳನ್ನು ನೀಡಿರುತ್ತೇವೆ. ಉಪನೋಂದಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತೇವೆ. ಈ ದಾವೆ ದಾಖಲಿಸಿದ ನಂತರ ಅರ್ಜಿ ಸಲ್ಲಿಸಿರುತ್ತೇವೆ. ಆ ಬಗ್ಗೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಎಂದು ನೆನಪಿಲ್ಲ. ಸದರಿ ಸರ್ವೆ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಋಣಭಾರ ಪ್ರಮಾಣ ಪತ್ರಗಳನ್ನು ಪಡೆಯಲು ಪ್ರಯತ್ನಿಸಿದ್ದು ಅವುಗಳನ್ನು ಹುಡುಕುತ್ತಿದ್ದೇವೆ. ನಾನು ಹುಡುಕುತ್ತಿದ್ದೇನೆ. ಆ ಬಗ್ಗೆ ನನಗೆ ಮಾಹಿತಿ ಇದ್ದು, ಕ್ರಯಪತ್ರಗಳ ಪ್ರತಿಗಳು ಸಹ ನನ್ನ ಬಳಿ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6)** ದಾವಾ ಐಟಂ ಸಂಖ್ಯೆ 1 1 ಚಿಕ್ಕಪಿಳ್ಳಯ್ಯ ಅವರಿಗೆ ಮಂಜೂರು ಆದ ಆಸ್ತಿ. ಆ ಬಗ್ಗೆ ಮಂಜೂರಾತಿ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನೋಡಿರುವುದಿಲ್ಲ. ಚಿಕ್ಕಪಿಳ್ಳಯ್ಯ ಅವರು ಅರ್ಜಿ ಸಲ್ಲಿಸಿ ಅವರಿಗೆ ಮಂಜೂರು ಆಗಿರುತ್ತದೆ. ಸದರಿ ಸ್ವತ್ತು ಆ ಹಿಂದೆ ಸರ್ವೆ ಸಂಖ್ಯೆ 31-56 ಆಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಪೋಡಿಯಾದ ನಂತರ ಸರ್ವೆ ಸಂಖ್ಯೆ 77 ಆಯಿತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ಭದ್ರಯ್ಯ ಅವರಿಂದ ದಿ.24-07-1974 ರ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನನಗೆ ಒಂದು ದಾಖಲೆಯನ್ನು ತೋರಿಸಿ ಅದು ಸದರಿ ಕ್ರಯಪತ್ರ ಎಂದು ಹೇಳಲು ನನಗೆ ಮಾಹಿತಿ

ಇಲ್ಲ ಎಂದು ನುಡಿಯುತ್ತೇನೆ. 1 ನೇ ಪ್ರತಿವಾದಿ ಕುರಿ ಸಾಕಾಣಿಕೆ ಕೆಲಸ ಮಾಡುತ್ತಾರೆ ಎಂದರೆ ಹೌದು, ವ್ಯವಸಾಯವನ್ನೂ ಸಹ ಮಾಡುತ್ತಾರೆ. ಅವರು ಕುರಿ ಸಾಕಾಣಿಕೆಯಿಂದ ಬಂದ ಲಾಭದಿಂದ ದಾವಾ ಐಟಂ ಸಂಖ್ಯೆ 11 ನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಅವರು ಯಾವ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸದರಿ ಸ್ವತ್ತು ಮಂಜೂರು ಆಗಿರುವ ಸ್ವತ್ತು ಎಂದು ನುಡಿಯುತ್ತೇನೆ. ಮಂಜೂರಾತಿ ಬಗ್ಗೆ ದಾಖಲೆಗಳನ್ನು ಹುಡುಕುತ್ತಿರುತ್ತೇವೆ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**